# ಮಾಲತಿ ಮಾತಾಡಿದಳು

ಬಾಬಣ್ಣ ಕಾಡು ದಾಟಿ ಹಸರು ಕಣಿವೆ ಹರಿಗದ್ದೆ ತಲುಪಿದಾಗ ನಸುಗೆಂಪು ಹೊಳಪಿನ ಮುಸ್ಸಂಜೆ ಬಾನಿಂದ ಜಾರುತ್ತ ಅವಸರದಲ್ಲಿ ಇಳಿದಿತ್ತು. ಇಳಕಲಲ್ಲಿ ಬಗ್ಗಿ ದಣಪೆ ಸರಿಸಿ, ಹುಲ್ಲು ಜಡ್ಡಿನ ಅಂಗಳದ ಒಣ ಅಡಿಕೆ ದಬ್ಬೆಗಳ ಮೇಲೆ ಡಬ ಡಬ ಹೆಜ್ಜೆ ಹಾಕುತ್ತ ಬಲು ಖಿನ್ನತೆಯಲ್ಲಿ ಬಿಕೊ ಎನ್ನುವ ಗದ್ದೆಯನ್ನು ಹಿಂದಕ್ಕೆ ಬಿಟ್ಟು ತಗ್ಗಿನಲ್ಲಿರುವ ಮನೆ ಮುಂದೆ ನಿಂತ. ಎರೆಸಿದ ಕದದ ಮನೆ ತಿರುಮಲ ಬಿಟ್ಟು ಹೋದ ಶೂನ್ಯವನ್ನು ದಿಗಿಲಿಂದ ಆಲಿಸುತ್ತ ದೀರ್ಘ ಆಕಳಿಕೆಯಲ್ಲಿ ಸುಮ್ಮನಿತ್ತು. ಜಗಲಿಯ ನೀರವತೆಯಲ್ಲಿ ತೀರಿದ ತಿರುಮಲನ ಸೂತಕದ ಮಂಕು ಛಾಯೆ ಮಬ್ಬುಗಟ್ಟಿ ನಿಂತಿತ್ತು. ಬೆಟ್ಟದ ನೆರಳ ತೇಪದಲ್ಲಿ ಕೌದಿಯಂತಾದ ಗದ್ದೆಯಲ್ಲಿ ಮೇಯುತ್ತಿದ್ದ ಕೆಂಪಿಯನ್ನು ಸಂಕದ ಮೇಲೆ ನಿಂತು ಕರೆಯುತ್ತಿದ್ದ ಮಾಲತಿ, ಬಾಬಣ್ಣ ಕದ ಬಡಿಯುತ್ತಿದ್ದ ಸದ್ದು ಕೇಳಿ ಹಿತ್ತಲಿಂದ ಬಂದು ಮಿಡ ಜಾರಿಸಿ ನಗುವಿನಿಂದ ಬರ ಮಾಡಿಕೊಂಡಳು. ಸುತ್ತಿದ ರದ್ದಿ ಪೇಪರಿಂದ ಬಿಡಿಸಿ, ಗಾಜು ಹಾಕಿ ಕಟ್ಟಿಸಿ ತಂದ ತಿರುಮಲನ ಹಿಗ್ಗಿಸಿದ ಫೋಟೊವನ್ನು ಒಳ ಬಾಗಿಲ ದಾರಂದದ ಮೇಲಿನ ಮೊಳೆಗೆ ತೂಗು ಹಾಕಿ, “ಸಿರ್ಸಿಯ ಜಯವಂತ್ ಸ್ಟುಡಿಯೊದಲ್ಲಿ ಮಾಡಿದ್ದು. ತುಸು ತಡ ಆದ್ರೂ ಚಲೊ ಮಾಡಿದ್ದ, ಅಲಾ” ಎಂದ. ಚಪ್ಪಟೆ ಮೋರೆಯ ಎಡಕ್ಕೆ ಬೈತಲೆ ತೆಗೆದ ಮುಗಳ್ನಗೆಗೆ ಎರಡೂ ಕಣ್ಣುಗಳ ತುದಿಯಲ್ಲಿ ಸಣ್ಣ ನೆರಿಗೆಗಳು ಮೂಡಿದ ಮೇಲ್ದುಟಿ ಮುಚ್ಚಿದ ಮೀಸೆಯ ನೀಲಿ ಅಂಗಿ ಕಾಲರಿನ ತಿರುಮಲ ಜಗಲಿಯಲ್ಲಿ ನಿಂತ ಸಕಲರನ್ನು ಎವೆಯಿಕ್ಕದೆ ದಿಟ್ಟಿಸುತ್ತಿದ್ದ. ಚಿಟ್ಟೆಗೆ ಹೋದ ಮಾಲತಿಗೆ ಅವನ ದೃಷ್ಟಿ ಹಿಂಬಾಲಿಸಿ ಧರೆಯಾಚೆ ಮೂರ್ಛೆ ಹೋದಂತೆ ಅರ್ಧಕ್ಕೆ ಜಡವಾಗಿ ನಿಂತ ಮನೆಯನ್ನು ತನಗೆ ತೋರಿಸುತ್ತಿರುವಂತೆ ಭಾಸವಾಗಿ ಕಣ್ಣೊರೆಸಿಕೊಂಡಳು.

ಕಂಬದ ನೆರಳು ಹಾಸಿದ ಹಿತ್ತಲ ಚಿಟ್ಟೆಯ ಮೇಲೆ ಮಂಡೆ ಬಾಚುತ್ತ ಸುದ್ದಿ ಪಿಸುಗುಟ್ಟುತ್ತಿದ್ದ ದೇವಕಿ ಹಣಿಗೆಗೆ ಜಡಕಾಗಿ ಸಿಕ್ಕಿದ ತಲೆಕಾಸನ್ನು ನಡು ಬಟ್ಟೆಗೆ ಸುತ್ತುತ್ತ ಬಾಬಣ್ಣನ ಮಾತು ಕೇಳಿ, ‘ತಡೆ ಕೂಸೆ ಕಾಲಿಂಗೆ ಬಾಳೆಕಾಯಿ ಬಂದು ಕಸ